ಮಾಡಬೇಕೆಂದು ಕೇಳಿಕೊಂಡಿದ್ದಾರೆ. ಅಲ್ಲಿ ಏನು ಮಾಡಬೇಕು ಎಂಬ ಬಗ್ಗೆ ಅವರೊಂದಿಗೆ ಚರ್ಚೆ ಮಾಡಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಚಿಕ್ಕಮಗಳೂರಿನಲ್ಲಿ ನಿವೇಶನಗಳ ವಿತರಣೆ

161 - ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಹೊಸ ಬಡಾವಣೆಯನ್ನು ರಚಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಈ ಬಡಾವಣೆಯಲ್ಲಿ ಆರ್ಥಿಕವಾಗಿ ಹಿಂದುಳಿದವರಿಗೆ 20 X 30 ಅಡಿ ಅಳತೆಯ ನಿವೇಶನವನ್ನು ಕೊಡಲು ಉದ್ದೇಶಿಸಲಾಗಿದ್ದು, ಅಂತಹ ನಿವೇಶನಗಳ ಸಂಖ್ಯೆ ಎಷ್ಟು?*

ಇ) *ಈ ನಿವೇಶನಗಳನ್ನು ಮಾರಾಟ ಮಾಡಲು ಸರ್ಕಾರ ಅನುಮತಿ ನೀಡಿದೆಯೇ?*

ಈ) *ಈ ನಿವೇಶನಗಳನ್ನು ಆಶ್ರಯ ಯೋಜನೆಯ ಅಡಿಯಲ್ಲಿ ಪಡೆಯುವುದಕ್ಕಾಗಿ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳು ಹಾಗೂ ಆಶ್ರಯ ಸಮಿತಿಯಿಂದ ಸರ್ಕಾರಕ್ಕೆ ಕೋರಲಾದ ಈ ನಿವೇಶನಗಳು ಆಶ್ರಯ ಸಮಿತಿಗೆ ನೀಡದೆ ಇರಲು ಕಾರಣವೇನು?*

ಶ್ರೀ ಬಿ.ಎನ್ ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರವು ಯಾವುದೇ ಹೊಸ ಬಡಾವಣೆಯನ್ನು ರಚಿಸಿರುವುದಿಲ್ಲ. ಆದರೆ ಸರ್ಕಾರದ ಆದೇಶ ಸಂಖ್ಯೆ ವನಇ 367 ಎಂಐಬಿ 89 ದಿನಾಂಕ 27-5-91ರಲ್ಲಿ ಹಿರೇಮಗಳೂರು ವಸತಿ ಬಡಾವಣೆಗೆ ಮಂಜೂರಾತಿಯನ್ನು ನೀಡಿರುತ್ತದೆ.

ಆ) ಅಂತಹ ನಿವೇಶನಗಳ ಸಂಖ್ಯೆ 810 ಗಳಾಗಿವೆ.

ಇ) ವಸತಿ ಯೋಜನೆಗೆ ಮಂಜೂರಾತಿಯನ್ನು ನೀಡುವಾಗ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ನಿವೇಶನ ಹಂಚಿಕೆ) ನಿಯಮಗಳು 1991ರನ್ವಯ ಆರ್ಥಿಕವಾಗಿ ಹಿಂದುಳಿದವರಿಗಾಗಿ 20 X 30 ಅಡಿ ಅಳತೆಯ ನಿವೇಶನವನ್ನು ಹಂಚಿಕೆ ಮಾಡಲು ಅನುಮತಿ ನೀಡಲಾಗಿದೆ. ಮಾರಾಟ ಮಾಡಲು ಅನುಮತಿಯನ್ನು ನೀಡಲಾಗಿರುವುದಿಲ್ಲ.

ಈ) ಪ್ರಾಧಿಕಾರವು ರಚಿಸಿದ ಒಟ್ಟು 1686 ನಿವೇಶನಗಳಲ್ಲಿ 810, 20 X 30ರ ನಿವೇಶನ -ಗಳನ್ನು ರಚಿಸಲಾಗಿದೆ. ಇವುಗಳಲ್ಲಿ ಆಶ್ರಯ ಯೋಜನೆಯ 200 ನಿವೇಶನಗಳನ್ನು ಅಂಬೇಡ್ಕರ್ ಯೋಜನೆಯ 50 ನಿವೇಶನಗಳನ್ನು ಚಿಕ್ಕಮಗಳೂರು ನಗರಸಭೆಗೆ ಮಂಜೂರು ಮಾಡಿದೆ. 560 ನಿವೇಶನಗಳಿಗೆ ಅರ್ಜಿ ಸಲ್ಲಿಸಿ ಹಣ ಪಾವತಿ ಮಾಡಿದ ಆರ್ಥಿಕವಾಗಿ ಹಿಂದುಳಿದವರಿಗೆ ಹಂಚಿಕೆ ಮಾಡಿದೆ. ಇದಕ್ಕಿಂತ ಹೆಚ್ಚು ನಿವೇಶನಗಳನ್ನು ರಚಿಸಲು ನಿಯಮಗಳಲ್ಲಿ ಅವಕಾಶವಿಲ್ಲದೆ ಇರುವುದರಿಂದ ಚಿಕ್ಕಮಗಳೂರು ಜಿಲ್ಲಾಧಿಕಾರಿಗಳಿಗೆ ಹಾಗೂ ಆಶ್ರಯ ಸಮಿತಿಗೆ ನಿವೇಶನವನ್ನು ನೀಡಲು ಸಾಧ್ಯವಾಗಿರುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ಚಿಕ್ಕಮಗಳೂರು ನಗರ ಪ್ರಾಧಿಕಾರದಿಂದ 2026 ನಿವೇಶನಗಳನ್ನು ಮಾಡಲು ಪ್ರಾಧಿಕಾರಕ್ಕೆ ಅನುಮತಿ ನೀಡಲಾಗಿತ್ತು. ಸರ್ಕಾರದ ಸುತ್ತೋಲೆಯ ಪ್ರಕಾರ ನಾಲ್ಕನೆ ಒಂದು ಭಾಗದಷ್ಟು ನಿವೇಶನವನ್ನು ಬಡತನದ ರೇಖೆಯ ಅಡಿಯಲ್ಲಿ ಬರುವವರಿಗೆ ಒದಗಿಸಬೇಕೆಂದಿದೆ. ಅಂದರೆ 20'X30' ನಿವೇಶನಗಳನ್ನು ಆ ವರ್ಗದವರಿಗೆ ಹಂಚಿಕೆ ಮಾಡಲು ಸರ್ಕಾರ ಅನುಮತಿ ನೀಡಿದೆ. ಅಂದರೆ ಸರ್ಕಾರದ ಅನುಮತಿಯನ್ನು ಪಡೆಯಬೇಕಾಗುತ್ತದೆ. ಆದರೆ ಚಿಕ್ಕಮಗಳೂರು ನಗರ ಪ್ರಾಧಿಕಾರದ ಅಧ್ಯಕ್ಷರು ಸರ್ಕಾರದಿಂದ ಆ ರೀತಿ ಅನುಮತಿಯನ್ನು ಪಡೆಯದೆ ಸುಮಾರು 810-850 ನಿವೇಶನಗಳನ್ನು ಅವರ ಮನಸ್ಸಿಗೆ ಬಂದಂತೆ ಮಾರಾಟ ಮಾಡಿರುವ ಬಗ್ಗೆ ಈ ಹಿಂದೆ ಸರ್ಕಾರದ ಗಮನಕ್ಕೆ ತಂದಿದ್ದೇವೆ. ಆದರೆ ಸರ್ಕಾರ ಇದರ ಬಗ್ಗೆ ಯಾವುದೇ ಕ್ರಮವನ್ನು ತೆಗೆದುಕೊಂಡಿರುವುದಿಲ್ಲ. ಚಿಕ್ಕಮಗಳೂರು ನಗರ ಪ್ರಾಧಿಕಾರ ತೆಗೆದುಕೊಂಡಿರುವ ಈ ನಿರ್ಣಯದ ಬಗ್ಗೆಯಾಗಲಿ, ಅಲ್ಲಿ ನಡೆಯುತ್ತಿರುವ ಭ್ರಷ್ಟಾಚಾರದ ಬಗ್ಗೆಯಾಗಲಿ ತನಿಖೆ ಮಾಡುವಂತೆ ಸರ್ಕಾರವನ್ನು ನಿರ್ಣಯದ ಮೂಲಕ ಒತ್ತಾಯ ಮಾಡಿದ್ದೇವೆ. ಇದರ ಬಗ್ಗೆ ಸರ್ಕಾರ ತನಿಖೆ ಮಾಡುತ್ತದೆಯೇ ಎಂಬುದು ನನ್ನ ಪ್ರಶ್ನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಮಾನ್ಯ ಉಪಾಧ್ಯಕ್ಷರೆ, 1991ರಲ್ಲಿ ಚಿಕ್ಕಮಗಳೂರಿನ ಹಿರೇಮಗಳೂರಿನ ಬಡಾವಣೆಯಲ್ಲಿ 1686 ನಿವೇಶನಗಳನ್ನು ಮಾಡಿದೆವು. ಅದರಲ್ಲಿ 30 ಪರ್‌ಸೆಂಟ್ ನಿವೇಶನಗಳನ್ನು ಇ.ಡಬ್ಲ್ಯೂ.ಎಸ್. ನವರಿಗೆ ಕೊಡುವುದಿತ್ತು. ಅಂದರೆ 810 ನಿವೇಶನಗಳನ್ನು ಕೊಟ್ಟಿರತಕ್ಕದ್ದು. ಅಲ್ಲಿನ ಜಿಲ್ಲಾಧಿಕಾರಿಯವರು ಮತ್ತು ನಗರಸಭೆಯವರು ಕೇಳಿಕೊಂಡಂತೆ ಆಶ್ರಯ ಯೋಜನೆಯಲ್ಲಿ 200 ನಿವೇಶನ, ಅಂಬೇಡ್ಕರ್ ಯೋಜನೆಯಲ್ಲಿ 50 ನಿವೇಶನಗಳನ್ನು ಕೊಡಲಾಗಿದೆ. ಮಾನ್ಯ ಸದಸ್ಯರು ಇದೇ ಇಲಾಖೆಯ ಸಚಿವರೂ ಆಗಿದ್ದರು ಮತ್ತು ಚಿಕ್ಕಮಗಳೂರು ನಗರ ಪ್ರಾಧಿಕಾರದ ಸದಸ್ಯರಾಗಿದ್ದಾರೆ. ಅವರು ಹೇಳಿರುವಂತೆ ಅಕ್ರಮಗಳೇನಾದರೂ ನಡೆದಿದ್ದರೆ ಅದರ ಬಗ್ಗೆ ವಿಚಾರಣೆ ಮಾಡುತ್ತೇವೆ. 810 ನಿವೇಶನಗಳಲ್ಲಿ 250 ನಿವೇಶನಗಳನ್ನು ಬಿಟ್ಟು ಉಳಿದ ನಿವೇಶನಗಳೇನಿದೆ ಅದನ್ನು ಅರ್ಜಿದಾರರಿಗೆ ಕೊಡಲಾಗಿದೆ. ಇದರಲ್ಲಿ ಅವ್ಯವಹಾರವಾಗಿದ್ದರೆ ಕಾನೂನಿನ ರೀತಿ ಕ್ರಮ ತೆಗೆದುಕೊಳ್ಳುತ್ತೇವೆ. 1991ರಲ್ಲಿ ಇದು ಆಗಿದೆ, ಆಗ ಅವರೇ ಸಚಿವರಾಗಿದ್ದರು, ಈ ಪ್ರಶ್ನೆಯಲ್ಲಿ ಅವರ ಉದ್ದೇಶವೇನು ಎಂಬುದನ್ನು ಮಾನ್ಯ ಸದಸ್ಯರು ದಯಮಾಡಿ ಹೇಳಬೇಕು. ಅವರು ಹಾಲಿ ಚಿಕ್ಕಮಗಳೂರು ನಗರ ಪ್ರಾಧಿಕಾರದಲ್ಲಿ ಸದಸ್ಯರಾಗಿದ್ದಾರೆ. ಅವರು ಉದ್ದೇಶವೇನು ಎಂಬುದನ್ನು ಪ್ರಶ್ನೆಯಲ್ಲಿ ಸರಿಯಾಗಿ ಕೇಳಿಲ್ಲ, ದಯಮಾಡಿ ಅದನ್ನು ಕೇಳಬೇಕು.

ಶ್ರೀ ಸಿ.ಆರ್. ಸಗೀರ್ ಅಹಮದ್ : ಮಾನ್ಯ ಉಪಾಧ್ಯಕ್ಷರೆ, ನಾನು 1991ರಲ್ಲಿ ಸಚಿವನಾಗಿರಲಿಲ್ಲ, 1993ರಲ್ಲಿ ಸಚಿವನಾಗಿದ್ದುದು. ನಾನು ಶಾಸಕನಾಗಿದ್ದ ಸಂದರ್ಭದಲ್ಲಿ ಆಶ್ರಯ ಯೋಜನೆಗೆ 200, ಅಂಬೇಡ್ಕರ್ ಯೋಜನೆಗೆ 50 ನಿವೇಶನಗಳನ್ನು ನಗರಸಭೆಗೆ ವರ್ಗಾಯಿಸಿರತಕ್ಕದ್ದು, ನಗರಸಭೆಯವರು ಹಣವನ್ನು ಪಾವತಿ ಮಾಡಿರತಕ್ಕದ್ದು, ಆ ಯೋಜನೆಗಳಲ್ಲೇನು ಫಲಾನುಭವಿಗಳಿದ್ದರು ಅವರಿಗೆ ನಿವೇಶನಗಳನ್ನು ವಿತರಣೆ ಮಾಡುವಲ್ಲಿ ನಾವು ಯಶಸ್ವಿಯಾಗಿದ್ದೇವೆ.

ಉಳಿದಂಥ ನಿವೇಶನಗಳನ್ನು ಪ್ರಾಧಿಕಾರದ ಅಧ್ಯಕ್ಷರು ಅವರ ಮನಸಾರೆ ಹಂಚಿದ್ದಾರೆ. ಜಿಲ್ಲಾಧಿಕಾರಿಯವರೇನು ಆರ್ಥಿಕವಾಗಿ ಹಿಂದುಳಿದವರಿಗೆ ನಿವೇಶನವನ್ನು ಕೊಡಬೇಕಾಗಿತ್ತೋ ಆ ರೀತಿ ಕೊಡುವುದರಲ್ಲಿ ಯಶಸ್ವಿಯಾಗಿಲ್ಲ. ನನ್ನ ಕ್ಷೇತ್ರದಲ್ಲಿ ಆಶ್ರಯ ಯೋಜನೆಯಲ್ಲೇನು ನಿವೇಶನಗಳನ್ನು ಕೊಡಬೇಕೆಂದು ಸರ್ಕಾರ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ ಆದರನ್ವಯ ನಮ್ಮ ಜಿಲ್ಲೆಯ ಜಿಲ್ಲಾಧಿಕಾರಿಯವರು ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಪತ್ರವನ್ನು ಬರೆದು 20' X 30' ನಿವೇಶನಗಳನ್ನು ಆಶ್ರಯ ಸಮಿತಿಗೆ ವರ್ಗಾಯಿಸುವಂತೆ ಸೂಚನೆ ನೀಡಿದರು. ಆದರೆ ನಗರ ಪ್ರಾಧಿಕಾರದ ಅಧ್ಯಕ್ಷರು ಅದನ್ನು ಬದಿಗಿಟ್ಟು ಅವರ ಮನಸಾರೆ ನಿವೇಶನಗಳನ್ನು ಮಾರಾಟ ಮಾಡಿದ್ದಾರೆ. ನಗರ ಪ್ರಾಧಿಕಾರಕ್ಕೆ ಸರ್ಕಾರ ನೀಡಿರುವ ಅನುಮತಿಯಲ್ಲಿ ಇ.ಡಬ್ಲ್ಯೂ.ಎಸ್. ಫಲಾನುಭವಿಗಳ್ಯಾರಿದ್ದಾರೆ ಅವರಿಗೆ ಶೇಕಡಾ 75ರಷ್ಟು ರಿಯಾಯಿತಿ ದರದಲ್ಲಿ ನಿವೇಶನವನ್ನು ಮಾರಾಟ ಮಾಡಲು ಅನುಮತಿ ನೀಡಿದೆ. ಆದರೆ ಇದನ್ನು ಅಲ್ಲಿನ ಅಧ್ಯಕ್ಷರು ಯಾರ ಗಮನಕ್ಕೂ ತರದೆ ನಿವೇಶನಗಳನ್ನು ಮನಸಾರೆ ಮಾರಾಟ ಮಾಡಿದ್ದಾರೆ. ಇದರಿಂದ ನಗರ ಪ್ರದೇಶ ವ್ಯಾಪ್ತಿಯಲ್ಲಿ ವಾಸಿಸುವಂಥ ಇ.ಡಬ್ಲ್ಯೂ.ಎಸ್. ಫಲಾನುಭವಿಗಳಿಗೆ ನಿವೇಶನ ಇಲ್ಲದಿರುವುದರಿಂದ ಆ ಪ್ರಾಧಿಕಾರದ ಅಧ್ಯಕ್ಷರು ತಪ್ಪು ಮಾಡಿದ್ದಾರೆ. ಜಿಲ್ಲಾಧಿಕಾರಿಯವರು ಬರೆದ ಪತ್ರಕ್ಕೂ ಮಾನ್ಯತೆ ಕೊಡದೆ ನೇರವಾಗಿ ಪ್ರಾಧಿಕಾರದ ಅಧ್ಯಕ್ಷರು ಈ ನಿವೇಶನಗಳನ್ನು ಮಾರಾಟ ಮಾಡಿಕೊಂಡಿದ್ದಾರೆ. ಕಾನೂನಿಗೆ ವಿರುದ್ಧವಾಗಿ ನಿರ್ಣಯಗಳನ್ನು ತೆಗೆದುಕೊಂಡಿರುವುದರಿಂದ ಇದರ ಬಗ್ಗೆ ತನಿಖೆ ಮಾಡಿ ಅಧ್ಯಕ್ಷರು ಮಾಡಿರುವ ತಪ್ಪಿನ ಬಗ್ಗೆ ತನಿಖೆ ಮಾಡಿ ಸರ್ಕಾರದಿಂದ ಏನು ಕ್ರಮ ತೆಗೆದುಕೊಳ್ಳುತ್ತೀರಿ ಎಂಬುದು ನನ್ನ ಪ್ರಶ್ನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಜಿಲ್ಲಾಧಿಕಾರಿಯವರಿಗೆ ಆಶ್ರಯ ಯೋಜನೆಯ ಅಡಿಯಲ್ಲಿ ನಗರಾಭಿವೃದ್ಧಿ ಪ್ರಾಧಿಕಾರದಿಂದ ನಿವೇಶನಗಳನ್ನು ಕೊಡಲು ಬರುವುದಿಲ್ಲ. ಆದರೂ ಇಲ್ಲಿ ಕೊಟ್ಟಿದ್ದಾರೆ. ಅದು ಹೇಗೆ ಆಗಿದೆಯೋ ನನಗೆ ಗೊತ್ತಿಲ್ಲ. ನಗರಸಭೆಯವರು ಹಣವನ್ನು ತುಂಬಿದ್ದಾರೆ. ಆದ್ದರಿಂದ ಅವರಿಗೆ ಇದನ್ನು ವಯಲೇಷನ್ ಮಾಡಿ ನಿವೇಶನವನ್ನು ಕೊಟ್ಟಿದ್ದಾರೆ. ಮಾನ್ಯ ಸದಸ್ಯರು 560 ನಿವೇಶನಗಳನ್ನು ಪ್ರಾಧಿಕಾರದ ಅಧ್ಯಕ್ಷರು ಅರ್ಜಿದಾರರನ್ನು ಆಯ್ಕೆಮಾಡುವಾಗ ನಿಯಮಗಳನ್ನು ಪರಿಪಾಲನೆ ಮಾಡದೆ ಮನಸಾರೆ ಹಂಚಿದ್ದಾರೆಂದು ಆರೋಪ ಮಾಡಿದ್ದಾರೆ. ಆ ರೀತಿ ಏನಾದರೂ ಕಾನೂನು ಬಾಹಿರವಾಗಿ ನಡೆದುಕೊಂಡಿದ್ದರೆ ಆ ಕಡತವನ್ನು ತರಿಸಿ ಮಾನ್ಯ ಸದಸ್ಯರೊಂದಿಗೆ ಕುಳಿತು ಚರ್ಚೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇನೆ.

ರಾಜ್ಯದ ಪ್ರಮುಖ ನಗರಗಳಲ್ಲಿ ನೋಂದಣಿ ಶುಲ್ಕ

162 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಇತ್ತೀಚಿನ ವರ್ಷಗಳಲ್ಲಿ ಪ್ರಮುಖ ನಗರಗಳ ಸ್ಥಿರಾಸ್ತಿಗಳ (ಭೂಮಿ ಕಟ್ಟಡ) ಮೌಲ್ಯ ಕಡಿಮೆಯಾಗುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?